ಅವರೆಲ್ಲ ಮಾತಾಡುವ ವಿಷಯಗಳನ್ನು ತಿಳಿದುಕೊಂಡು ಸೂಫಿಗಳ ಬಗ್ಗೆ ಆಕರ್ಷಣೆ ಬೆಳೆಯುತ್ತ ಹೋಯ್ತು. ಅವರ ವಿಚಾರಗಳ ಬಗ್ಗೆ ಆಸಕ್ತಿ ಬೆಳೆಯುತ್ತ ಹೋಯ್ತು. ಅವರ ಜತೆಗೆ ತಂದೆಯವರ ಜತೆಗೆ ಅನ್ಯೋನ್ಯತೆ ಇದ್ದುದರಿಂದ ಅವರ ಕಥೆಗಳನ್ನು ನನಗೂ ಹೇಳುತ್ತಿದ್ದರು. ಬಾಬಾ ಬುಡನ್ ಗಿರಿ, ಉಳ್ಳಾಲದ ಕಥೆಗಳನ್ನು ಹೇಳುತ್ತಿದ್ದರು.

ನಂತರ ಕನ್ನಡದಲ್ಲಿ ಬಂದ ಸೂಫಿ ಸಾಹಿತ್ಯ ಓದಿದೆ. ಉದಾಹರಣೆಗೆ ರಹಮತ್ ತರೀಕೆರೆ ಬರೆದ ಪುಸ್ತಕ. ಒಳ್ಳೇದಿದೆ ಅದು. ಆದರೆ ಅದರಲ್ಲಿ ಸಾಂಸ್ಕೃತಿಕ, ಜಾನಪದದ ಹಿನ್ನೆಲೆಯಲ್ಲಿ, ಸೌಹಾರ್ದದ ಕೊಡುಕೊಳ್ಳುವಿಕೆಯೇ ಪ್ರಧಾನವಾಗಿರುತ್ತಿತ್ತು. ಅವರ ಅಧ್ಯಾತ್ಮದ ಹಿನ್ನೆಲೆ ಏನು, ಚಿಂತನೆಗಳೇನು, ಅದರ ಉದ್ದೇಶ ಏನು ಅನ್ನುವುದು ಅಲ್ಲಿ ಇಲ್ಲ. ಅವರು ಜನರ ಮೇಲೆ ಯಾವ ರೀತಿ ಪರಿಣಾಮ ಬೀರಿದರು ಎನ್ನುವುದೇ ಪ್ರಧಾನವಾಗಿ ಇದೆ. ನನಗೆ ಹಿಂದಿನಿಂದಲೂ ಇದ್ದ ಸೂಫಿಗಳ ಮೇಲಿನ ಆಸಕ್ತಿ ಮತ್ತೆ ಕೆರಳಲಿಕ್ಕೆ ಶುರುವಾಯ್ತು. ಸೂಫಿಗಳ ಆಧ್ಯಾತ್ಮಿಕ ಹಿನ್ನೆಲೆಯ ಬಗ್ಗೆ ಹೇಳಬೇಕು ಅನಿಸಿತು. ದರ್ಗಾದಲ್ಲಿ ಲಕ್ಷಾಂತರ ಜನ ಸೇರ್ತಾರೆ. ಆದರೆ ಅವರು ಏನು ಬರೆದಿದ್ದಾರೆ, ಅವರ ವಿಚಾರಧಾರೆ ಏನು ಎನ್ನುವುದನ್ನು ತಿಳಿದುಕೊಳ್ಳಬೇಕು, ಅದರ ಬಗ್ಗೆ ಬರೆಯಬೇಕು ಎಂದು ಅನಿಸಲು ಶುರುವಾಯ್ತು. ಈ ಆಸಕ್ತಿಯಿಂದಲೇ ನಾನು ಸೂಫಿಗಳ ಕುರಿತು ಮೊದಲ ಪುಸ್ತಕ ಬರೆದಿದ್ದು. ಮೊದಲು ಬರೆದಿದ್ದು 'ಸೂಫಿ ಸಂತರು' ಎಂಬ ಪುಸ್ತಕ. ಅದರಲ್ಲಿ 25 ಸೂಫಿ ಸಂತರ ಪರಿಚಯಾತ್ಮಕ ಲೇಖನ ಇದೆ. ನಂತರ 'ಸೂಫಿ ಮಹಿಳೆಯರು', 'ಉತ್ತರ ಕರ್ನಾಟಕದ ಸೂಫಿಗಳು' ಪುಸ್ತಕಗಳನ್ನು ಬರೆಯುವಾಗ ಅವರ ಚಾರಿತ್ರಿಕ ಹಿನ್ನೆಲೆ ಮತ್ತು ಅವರ ಅನುಭವಗಳನ್ನು ಗಣನೆಗೆ ತೆಕ್ಕೊಂಡು ಬರೆಯಲಿಕ್ಕೆ ಪ್ರಯತ್ನ ಮಾಡಿದ್ದೇನೆ. ಇನ್ನೊಂದು 'ಸೂಫಿ ಚಿಂತನೆಗಳು' ಎಂಬ ಪುಸ್ತಕ ಮತ್ತು 'ಸೂಫಿ ದರ್ಶನ' ಎಂಬ ಪುಸ್ತಕಗಳನ್ನು ಬರೆಯುತ್ತಿದ್ದೇನೆ. ನನ್ನ ಅನಾರೋಗ್ಯದಿಂದಾಗಿ ಇನ್ನೂ ಪೂರ್ತಿಗೊಳಿಸುವುದು ಸಾಧ್ಯವಾಗಿಲ್ಲ.

- **ಮೊದಲು ನಿಮ್ಮ ಕಥೆಗಳ ಮೂಲಕ ಹಲವು ಸೂಕ್ಷ್ಮ ವಿಷಯಗಳನ್ನು ಹೇಳುತ್ತಿದ್ದೀರಿ. ಆದರೆ ಆಗ ಮುಸ್ಲಿಂ ಸಮಾಜ ನಿಮ್ಮನ್ನು ಒಳಗೊಳ್ಳಲಿಕ್ಕೆ ಸಿದ್ಧ ಇರಲಿಲ್ಲ. ಆದರೆ ಈಗ ನಿಮ್ಮನ್ನೂ ಸೇರಿದಂತೆ ಕ್ರಿಟಿಕಲ್ ಆಗಿ ಬರೆಯುವ ಹಲವು ಲೇಖಕರನ್ನು ಮುಸ್ಲಿಂ ಸಮಾಜ ಒಳಗೊಳ್ಳುತ್ತಿದೆ. ಆದರೆ ಕೋಮುವಾದದಂಥ ದೊಡ್ಡ ಸವಾಲು ನಿಮ್ಮೆದುರು ಇದೆ. ಇದನ್ನು ಹೇಗೆ ನೋಡುತ್ತೀರಿ?**

ಕೋಮುವಾದ ನಮ್ಮನ್ನು ವಿಶೇಷವಾಗಿ ಕಾಡಿದ್ದು ದೇಶವಿಭಜನೆಯ ನಂತರದಲ್ಲಿ. 1992ರ ಬಾಬ್ರಿ ಮಸೀದಿ ಪ್ರಕರಣದಲ್ಲಿ. ನಂತರದಲ್ಲಿ ಅಲ್ಲಲ್ಲಿ ಕಂಡುಬಂದ ಬಹಳ ಘಟನೆಗಳು ನಮ್ಮನ್ನು ತುಂಬ ಆತಂಕಕ್ಕೀಡು ಮಾಡಿದವು. ಇದರ ಹಿನ್ನೆಲೆಯಲ್ಲಿಯೇ ನಮ್ಮ ವಿಚಾರಗಳನ್ನು ಇನ್ನಷ್ಟು ವಿಮರ್ಶೆಗೆ ಒಳಪಡಿಸಲಿಕ್ಕೆ ಶುರುಮಾಡಿದೆವು. ಅದರ ಹಿನ್ನೆಲೆಯಲ್ಲಿ ಹಲವು ಕಥೆಗಳನ್ನು ಬರೆದೆ. ಸಾಹಿತ್ಯಿಕವಾಗಿಯೂ ನಮ್ಮ ಮೇಲೆ ತುಂಬ ಪ್ರಭಾವ ಬೀರಿದ ಘಟನೆಗಳು ನಡೆದವು. ನಾವು ಒಂಥರದಲ್ಲಿ ಹೊರಗಿನವರಾಗಿ ಕಂಡುಬರುವಂತಾಯ್ತು. ಬಾಬ್ರಿ ಮಸೀದಿ ಘಟನೆಯ ಹಿನ್ನೆಲೆಯಲ್ಲಿ, ನಾವು ಎಷ್ಟೇ ನಮ್ಮ ಸಮಾಜದ ಕುರಿತು ಕ್ರಿಟಿಕಲ್ ಆಗಿ ಇದ್ದರೂ ಕೂಡ ಸಮಾಜ ನಮ್ಮನ್ನು ನೋಡುವುದು ಮುಸ್ಲಿಮರು ಎಂದಾಗಿಯೇ. ಮುಸ್ಲಿಮರು ಮತ್ತು ಮುಸ್ಲಿಮೇತರರು ಎಂಬ ವಿಭಾಗೀಕರಣ ನಮ್ಮೆದುರು ಇದ್ದ ದೊಡ್ಡ ಸವಾಲಾಗಿತ್ತು. ಮುಸ್ಲಿಂ ಧರ್ಮದಲ್ಲಿ ನಂಬಿಕೆ ಇಟ್ಟವರು 'ನಮಗೆ ಈ ದೇಶದಲ್ಲಿ ಬದುಕಲಿಕ್ಕೆ ಸಾಧ್ಯ ಇಲ್ಲ' ಎಂದುಕೊಳ್ಳುವ ಪರಿಸ್ಥಿತಿ ನಿರ್ಮಾಣವಾಯಿತು. ಅದೇ ರೀತಿಯಲ್ಲಿ ಮುಸ್ಲಿಮರ ಬಗ್ಗೆ ಸ್ವಲ್ಪ ಸಹಾನುಭೂತಿ ಇಟ್ಟುಕೊಂಡವರೂ ಕೂಡ 'ಮುಸ್ಲಿಮರೆಲ್ಲರೂ ಯಾಕೆ ಹೀಗಿರ್ತಾರೆ? ಅವರು ಯಾಕೆ ನಮಗಿಂತ ಬೇರೆ ರೀತಿ ಸಂಸ್ಕೃತಿಯಲ್ಲಿ